(6) Rape on alady working in Combined Hospital, Shikaripur Town.

ಶ್ರೀ ಬಿ. ಸ್ವಾಮಿರಾವ್.— ಸನ್ಮಾನ್ಯ ಉಪಾಧ್ಯಕ್ಷರೆ, ನಾನು ಎತ್ತುವಂತಹ ಪ್ರಶ್ನೆಗೆ ಸದನದಲ್ಲಿ ಮೊದಲನೆಯದಾಗಿ ಉತ್ತರಕೊಡತಕ್ಕಂತಹ ಕಾನೂನು ಸಚಿವರು ವಿವರ ತರಿಸಿ ಉತ್ತರಕೊಡುತ್ತೇನೆಂಬ ಉತ್ತರವನ್ನು ಕೊಡುತ್ತಾರೆ. ಅದನ್ನು ನಾನೇ ಹೇಳಿಕೊಂಡು

ಶ್ರೀ ಎ. ಲಕ್ಷ್ಮೀಸಾಗರ್.— ಉತ್ತರ ಹೇಳುತ್ತೇನೆ.

ಶ್ರೀ ಬಿ. ಸ್ವಾಮಿರಾವ್.— 14-3-1984ರಲ್ಲಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ಟೌನ್‌ನ ಕಂಬೈಂಡ್ ಆಸ್ಪತ್ರೆಯಲ್ಲಿ 28 ವರ್ಷದ ಯುವತಿಯ ಮೇಲೆ ಅತ್ಯಾಚಾರ ಮಾಡುವುದಕ್ಕೆ 4 ಜನ ಗೂಂಡಾಗಳು ಪ್ರಯತ್ನಪಟ್ಟಾಗ ಅದನ್ನು ಪ್ರತಿಭಟಿಸಿದ್ದಕ್ಕೆ ಆಕೆಯ ಮೈಮೇಲೆ ಸೀಮೆಎಣ್ಣೆಯನ್ನು ಸುರಿದು ಬೆಂಕಿಹಚ್ಚಿ ಅವರ ಜೀವತೆಗೆದಿದ್ದಾರೆ. ಅದರ ಬಗ್ಗೆ ಸಾಕಷ್ಟು ದಾಖಲೆಗಳು ನನ್ನಲ್ಲಿ ಇವೆ. ಮತ್ತೆ ಈ ವಿಚಾರ ಪತ್ರಿಕೆಯಲ್ಲೂ ಕೂಡ ಬಂದಿದೆ. ಇವರ ಕೊಲೆಯಾಗುವುದಕ್ಕೆ ಮೇಲಿನವರೂ ಇದರಲ್ಲಿ ಸೇರಿದ್ದಾರೋ ಏನೋ ಎನ್ನುವ ಅನುಮಾನ ಬಂದಿದೆ. ಆದ್ದರಿಂದ ಈ ವಿಚಾರದಲ್ಲಿ ಸಿ.ಒ.ಡಿ.ಗೆ ಒಪ್ಪಿಸಿ, ತಪ್ಪಿತಸ್ಥರನ್ನು ಬಯಲಿಗೆ ಎಳೆಯಬೇಕು. ಈ ರೀತಿ ಮಾಡಿದ್ದೇ ಆದರೆ ರಾಜ್ಯಕ್ಕೆ ಒಳ್ಳೆಯ ಕೀರ್ತಿ ಬರುತ್ತದೆ. ನಿಮಗೂ ಒಳ್ಳೆಯ ಕೀರ್ತಿ ಬರುತ್ತದೆ, ನಮಗೂ ಕೂಡ ಒಳ್ಳೆಯ ಕೀರ್ತಿ ಬರುತ್ತದೆಂಬುದಕ್ಕೆ ಈ ವಿಚಾರವನ್ನು ಸದನದ ಮುಂದೆ ಪ್ರಸ್ತಾಪಮಾಡುತ್ತಿದ್ದೇನೆ. ಈ ವಿಚಾರವನ್ನು ದಯವಿಟ್ಟು ಮಾಡಿ ಸಿ.ಒ.ಡಿ.ಗೆ ಒಪ್ಪಿಸಿ ಅದರ ಮೂಲಕ ಈ ಬಗ್ಗೆ ತನಿಖೆಯಾಗಬೇಕೆಂದು ತಮ್ಮಲ್ಲಿ ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಸನ್ಮಾನ್ಯ ಉಪಾಧ್ಯಕ್ಷರೆ, 14-3-1984ರಲ್ಲಿ ಆಯಾ ಕೆಲಸದಲ್ಲಿರತಕ್ಕಂತಹ — ಎಂಬುವವರು ಸಟ್ಟು ಗಾಯಗಳಿಂದ ನರಳುತ್ತಿದ್ದಳು. ಆಕೆಯನ್ನು ಆಸ್ಪತ್ರೆಗೆ ಶಿವಕುಮಾರ ಎಂಬುವವರು ಸೇರಿಸಿದರು. ಅವರಿಗೆ ಆಸ್ಪತ್ರೆಯಲ್ಲಿ ಆರೈಕೆಯನ್ನು ಕೊಡತಕ್ಕಂತಹ ಸಮಯದಲ್ಲಿ ನನಗೆ ಸ್ಟೌವ್ ಭರ್ಸ್ಟ್ ಆಗಿ ಸುಟ್ಟಗಾಯಗಳಾಗಿವೆಂದು ತನ್ನ ಹೇಳಿಕೆಯಲ್ಲಿ ಆಕೆ ಡಾಕ್ಟರ್‌ರವರಿಗೆ ತಿಳಿಸಿರುವುದಾಗಿಯೂ ಮತ್ತು ಈ ಸುಟ್ಟ ಗಾಯಗಳಿಗೆ ಬೇರೆ ಯಾರೂ ಕಾರಣರಲ್ಲವೆಂದು ಆಕೆಯೇ ತಿಳಿಸಿದ್ದು, ಆಕೆ 18-3-84ರಲ್ಲಿ ಕಾಲವಾದರು. ಮುಂದಿನ ತನಿಖೆ ಆ ಬಗ್ಗೆ ನಡೆಯುತ್ತಿದೆ. ನನ್ನನ್ನು ಯಾರೂ ಅತ್ಯಾಚಾರ ಮಾಡಲಿಲ್ಲವೆಂಬ ಮಾತನ್ನೂ ಕೂಡ ಆಕೆ ಹೇಳಿದ್ದಾರೆ. ಮುಂದಿನ ತನಿಖೆ ನಡೆಯುತ್ತಿದೆ. ಮಾನ್ಯ ಸ್ವಾಮಿರಾವ್‌ರವರು ನನ್ನ ಹತ್ತಿರ ದಾಖಲಾತಿಗಳು ಇವೆ ಎಂದು ಏನು ಹೇಳಿದ್ದಾರೆ ಆ ದಾಖಲಾತಿಗಳನ್ನು ಸ್ಥಳೀಯ ಪೋಲೀಸ್‌ನವರಿಗೆ ಕಳುಹಿಸತಕ್ಕದ್ದು ಎನ್ನುವ ಮಾತನ್ನು ಅವರಿಗೆ ಹೇಳುವುದಕ್ಕೆ ಇಷ್ಟಪಡತ್ತೇನೆ. ನುತ್ತು ಏನು ಅವರು ಸ್ಥಾನಿಕ ಪೋಲೀಸ್‌ನವರ ಬಗ್ಗೆ ಸಂಶಯ ಇದೆ ಎಂದು ಹೇಳುತ್ತಿದ್ದಾರೆ. ಆ ರೀತಿ ಸಂಶಯ ಬರುವ ರೀತಿಯಲ್ಲಿ ಕೆಲಸಮಾಡದೆ ನ್ಯಾಯವನ್ನು ದೊರಕಿಸಿಕೊಡತಕ್ಕಂತಹದ್ದರಲ್ಲಿ ಸ್ಥಳೀಯ ಪೋಲೀಸ್‌ನವರು ಕೆಲಸ ಮಾಡದಿದ್ದರೆ ವಿಚಾರವನ್ನು ಸಿ.ಒ.ಡಿ.ಗೆ ಒಪ್ಪಿಸುವುದು ಆಮೇಲೆ ನೋಡೋಣ ಎಂಬುದನ್ನೂ ಕೂಡ ಅವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಫ್. ಎ. ಕೊಪ್ಪದ್.— ನಮ್ಮ ತಾಲ್ಲೂಕಿನ ನೀರಿನ ಹಾವಳಿ ಹೆಚ್ಚಾಗಿದೆ. 10 ಹಳ್ಳಿಗೆ ನೀರನ್ನು ಸಪ್ಲೈ ಮಾಡುವುದಕ್ಕೆ ಒಂದೇ ಮೋಟರು ಇದೆ. ಒಂದೇ ಮೋಟರಿನಲ್ಲಿ 10 ಹಳ್ಳಿಗಳಿಗೆ ಕುಡಿಯುವ ನೀರನ್ನು ಸರಬರಾಜು ಮಾಡುವಂತಹದ್ದು ಬಹಳ ಕಷ್ಟ ಇದೆ. ಏನಾದರೂ ಪ್ರಯತ್ನಮಾಡಿ ಎಂದು ಹೇಳುತ್ತಿದ್ದೇನೆ.

ಶ್ರೀ ವಿ. ಎಲ್. ಪಾಟೀಲ್.— ವರದಿಯನ್ನು ತರಿಸಿಕೊಂಡು ಆ ಬಗ್ಗೆ ತಕ್ಕ ವ್ಯವಸ್ಥೆಯನ್ನು ನಂತರ ಮಾಡುತ್ತೇನೆಂದು ಹೇಳುತ್ತಿದ್ದೇನೆ. ಮೊನ್ನೆ ತಾನೆ ಮಾನ್ಯ ಸದಸ್ಯರು ಆ ವಿಷಯವನ್ನು ತಿಳಿಸಿದ್ದಾರೆ.

ಶ್ರೀ ಎಫ್. ಎ. ಕೊಪ್ಪದ.— ಒಂದೇ ಮೋಟರ್‌ನಲ್ಲಿ 10 ಹಳ್ಳಿಗಳಿಗೆ ನೀರನ್ನು ಸಪ್ಲೈ ಮಾಡುವುದು ಬಹಳ ಕಷ್ಟವಾಗುತ್ತಿದೆ,

ಶ್ರೀ ವಿ. ಎಲ್ ಪಾಟೀಲ್.— ವರದಿಯನ್ನು ಸಂಬಂಧಪಟ್ಟವರಿಂದ ತರಿಸಿಕೊಂಡು ಮುಂದಿನ ಕ್ರಮ ತೆಗೆದುಕೊಳ್ಳುವುದಕ್ಕೆ ಜಿಲ್ಲಾಧಿಕಾರಿಯವರಿಗೆ ಆದೇಶವನ್ನು ಕೊಡುತ್ತೇನೆ.

ಗಮನ ಸೆಳೆಯುವ ಸೂಚನೆ

Subject : Non-availability of medical staff in PHU Shirva Udu i Taluk (D. K.)

ಶ್ರೀ ವಸಂತ ವಿ. ಸಾಲಿಯಾನ:— ವೈದ್ಯಾಧಿಕಾರಿ ಹಾಗೂ ಕ್ಷ ಕಿರಣ ತಂತ್ರಜ್ಞರೂ ಸೇರಿದಂತೆ ಉಡುಪಿ ತಾಲ್ಲೂಕಿನ ಶಿರ್ವಾ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯಕೀಯ ಸಿಬ್ಬಂದಿಯ ಕೊರತೆ

ಯಿಂದ ಈ ಪ್ರದೇಶದ ಜನಗಳಿಗೆ ಬಹುವಾಗಿ ತೊಂದರೆಯುಂಟಾಗಿರುವ ಬಗ್ಗೆ ನಾನು ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಸಚಿವರ ಗುಮನ ಸೆಳೆಯುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಶಿರ್ವಾದಲ್ಲಿನ ಪ್ರಾಥಮಿಕ ಆರೋಗ್ಯ ಘಟಕವು ಸರ್ಕಾರವು 26-3-1979ರಲ್ಲಿ ವಹಿಸಿಕೊಂಡ ಸಂಸ್ಥೆಯಾಗಿದೆ. ಇಲ್ಲಿನ ವೈದ್ಯಾಧಿಕಾರಿಯ ಹುದ್ದೆ ಖಾಲಿ ಇಲ್ಲ. ಆದರೆ ಅವರು 3-3-1984 ರಿಂದ 31-5-1984ರ ವರೆಗೆ ರಜೆಯ ಮೇಲೆ ತೆರಳಿದ್ದಾರೆ. ಸನಿಹದ ಪ್ರಾಥಮಿಕ ಘಟಕವಾದ ಕಾಪುವಿನ ವೈದ್ಯಾಧಿಕಾರಿಗಳನ್ನು ಅಡಿಷನಲ್ ಛಾರ್ಜಿನಲ್ಲಿ ಇಡಲಾಗಿತ್ತು. ಆದರೆ ಅವರು ಸಹಾ 6-3-84ರಿಂದ 4-4-1984ರ ವರೆಗೆ ರಜಾ ಹೋಗಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳನ್ನು ಸದರಿ ಶಿರ್ವಾಗೆ ಸದ್ಯಕ್ಕೆ ಓರ್ವ ಲೀವ್ ರಿಸರ್ವ್ ಡಾಕ್ಟರನ್ನು ಹಾಕಲು ಆದೇಶ ನೀಡಲಾಗಿದೆ.

ಕ್ಷ ಕಿರಣ ತಂತ್ರಜ್ಞರ ಹುದ್ದೆಯು, ಕ್ಷ ಕಿರಣ ತಂತ್ರಜ್ಞರು ನಿವೃತ್ತಿಗೊಂಡದ್ದರಿಂದ ಫೆಬ್ರುವರಿ 80 ರಿಂದ ಖಾಲಿಯಾಗಿದೆ.

ಇಲಾಖಾ ನೇಮಕಾತಿ ಸಮಿತಿಯು ಅಭ್ಯರ್ಥಿಗಳ ಆಯ್ಕೆ ಮಾಡಿದ್ದು ಸುಮಾರು ಒಂದು ವಾರದೊಳಗಾಗಿ ಈ ಹುದ್ದೆಯನ್ನು ತುಂಬಲಾಗುವುದು.

ಓರ್ವ ಸಹಾಯಕ ಶುಶ್ರೂಷಾ ದಾದಿ ಮತ್ತು ಓರ್ವ ದಾದಿ ಇಲ್ಲಿ ಕೆಲಸಮಾಡುತ್ತಿದ್ದಾರೆ.

ಈರ್ವರು ನಾಲ್ಕನೆಯ ದರ್ಜೆಯ ನೌಕರರು ಕೆಲಸಮಾಡುತ್ತಿದ್ದಾರೆ. ಕೇವಲ ಕಾವಲುಗಾರ ಮತ್ತು ಅಡಿಗೆಯವನ ಹುದ್ದೆ ಖಾಲಿಇವೆ. ತುಂಬಲಾಗುವುದು.

ಶ್ರೀ ವಸಂತ ವಿ. ಸಾಲಿಯಾನ.— ಅಲ್ಲಿರತಕ್ಕಂತಹ ಪ್ರಾಥಮಿಕ ಹೆಲ್ತ್ ಸೆಂಟರ್ ಅನ್ನು ಸರ್ಕಾರ ದವರು ವಹಿಸಿಕೊಂಡ ಮೇಲೆ, ಅಲ್ಲಿರತಕ್ಕಂತಹ ಮೆಡಿಕಲ್ ಆಫೀಸರ್ ಹಾಗೂ ಅಲ್ಲಿರತಕ್ಕಂತಹ ಸಿಬ್ಬಂದಿಗೆ ಯಾವುದೇ ರೀತಿಯ ಬಡ್ತಿಯಾಗಲೀ ಅಥವಾ ಹೆಚ್ಚಿನ ವೇತನವನ್ನಾಗಲೀ ಕೊಡದೇಇರುವುದರಿಂದ ಅವರು ಯಾವುದೇ ರೀತಿಯ ಆಸಕ್ತಿಯನ್ನು ವಹಿಸದೆ ಬೇಜವಾಬ್ದಾರಿಯಿಂದ ಕೆಲಸಮಾಡುತ್ತಿದ್ದಾರೆ. ಅವರು ಮೂರನೆಯ ತಾರೀಖಿನಿಂದ ರಜಾ ಹಾಕಿದ್ದಾರೆ. ಫಾರಿನ್ ಕಂಟ್ರೀಗೂ ಕೂಡ ಹೋಗಿದ್ದಾರೆ. ಕ್ಷ ಕಿರಣ ತಂತ್ರಜ್ಞರ ಹುದ್ದೆಯು ಸುಮಾರು 1980ರಿಂದ ಖಾಲಿಬಿದ್ದಿದೆ. ಈ ರೀತಿ ಇರುವುದರಿಂದ ಆ ಆಸ್ಪತ್ರೆಗೆ ಯಾರೂ ಹೋಗದೆ ಅದು ಇವೊತ್ತು ಕೇವಲ ದನಗಳು ವಾಸಮಾಡುವಂತಹ ಆಸ್ಪತ್ರೆಯಾಗಿದೆ. ಇದರ ಬಗ್ಗೆ ತಾವು ಸೂಕ್ತಕ್ರಮ ತೆಗೆದುಕೊಳ್ಳಬೇಕು. ಅಲ್ಲಿರತಕ್ಕಂತಹ ಮೆಡಿಕಲ್ ಆಫೀಸರ್ ಯಾವುದೇ ರೀತಿಯ ಕೆಲಸವನ್ನು ಮಾಡದೆ ಕೇವಲ ಶರಾಬನ್ನು ಕುಡಿದುಕೊಂಡು ಆಸ್ಪತ್ರೆಗೆ ಬರುತ್ತಾರೆ. ಆದ್ದರಿಂದ ಯಾವ ಜನರೂ ಸ್ಥಳೀಯವಾಗಿರತಕ್ಕಂತಹವರು ಆ ಆಸ್ಪತ್ರೆಗೆ ಬರುತ್ತಿಲ್ಲ. ಆದ್ದರಿಂದ ಆ ಮೆಡಿಕಲ್ ಆಫೀಸರನ್ನು ಕೂಡಲೇ ವರ್ಗಾವಣೆ ಮಾಡಬೇಕು. ಅವರು ಈಗಾಗಲೇ ರಜಾಹಾಕಿ ಫಾರಿನ್ ಕಂಟ್ರಿಗೆ ಹೋಗಿದ್ದಾರೆ. ಆದರ ಬಗ್ಗೆ ನನ್ನಲ್ಲಿ ರೆಕಾರ್ಡುಗಳು ಇವೆ. ಆ ಆಸ್ಪತ್ರೆಯಲ್ಲಿ ಖಾಲಿ ಇರುವಂತಹ ಎಕ್ಸ್-ರೇಟೆಕ್ನೀಷಿಯನ್ ಹುದ್ದೆಯನ್ನು ಕೂಡಲೇ ಭರ್ತಿಮಾಡಬೇಕು. ಅದೇರೀತಿ ಮೆಡಿಕಲ್ ಆಫೀಸರ್ಸನ್ನು ಕೂಡಲೇ ನೇಮಕಮಾಡಬೇಕು. ಹಾಲಿ ಮೆಡಿಕಲ್ ಆಫೀಸರ್ಸನ್ನು ಕೂಡಲೇ ಬೇರೆಕಡೆಗೆ ವರ್ಗಾವಣೆ ಮಾಡಬೇಕು.

ಡಾ. ವಿ. ಎಸ್. ಆಚಾರ್ಯ!— ನಮ್ಮ ಜಿಲ್ಲೆಗೆ ಸಂಬಂಧಪಟ್ಟಂತಹ ಆಸ್ಪತ್ರೆಗಳ ಸ್ಥಿತಿಯನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ಈಗಾಗಲೇ ತಂದಿದ್ದೇವೆ, ನಮ್ಮ ಜಿಲ್ಲೆಯಲ್ಲಿರತಕ್ಕ ಪಿ.ಎಚ್.ಸಿ. ಹಾಗೂ ಪ.ಎಚ್.ಯು.ಗಳಲ್ಲಿ ಡಾಕ್ಟರುಗಳು ಇಲ್ಲ. ಇದನ್ನೂ ಕೂಡ ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇವೆ, ಆದ್ದರಿಂದ ಆ ಆಸ್ಪತ್ರೆಗಳನ್ನು ಸುಸಜ್ಜಿತ ಆಸ್ಪತ್ರೆಗಳನ್ನಾಗಿ ಮಾಡಲು ಮಂತ್ರಿಗಳು ಹೇಗಾದರೂ ಪ್ರಯತ್ನಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಇತ್ತೀಚೆಗೆ ದಕ್ಷಿಣ ಕನ್ನಡ ಜಿಲ್ಲೆಗೆ ಹೋಗಿದ್ದಾಗ, ಶಿರ್ವಾದಲ್ಲಿನ ಪ್ರಾಥಮಿಕ ಆರೋಗ್ಯ ಘಟಕದಲ್ಲಿ ಕಳೆದ 3-4 ದಿವಸಗಳ ಹಿಂದಿನಿಂದ ಸಾರ್ವಜನಿಕರಿಗೆ ಆಗಿರುವಂತಹ ತೊಂದರೆಯನ್ನು ಡಾ. ಆಚಾರ್ಯರವರು ಹಾಗೂ ಇತರೇ ಶಾಸಕರು ನನ್ನನ್ನು ಭೇಟಿಮಾಡಿ ತಿಳಿಸಿದರು. ಮತ್ತೆ ಸಾರ್ವಜನಿಕರೂ ಕೂಡ ನನ್ನನ್ನು ಭೇಟಿಮಾಡಿ ತಿಳಿಸಿದ್ದಾರೆ. ಅಲ್ಲಿರತಕ್ಕಂತಹ ವೈದ್ಯಾಧಿಕಾರಿಗಳು ಹೊರದೇಶಕ್ಕೆ ಹೋಗಿದ್ದಾರೆಂಬುದರ ಬಗ್ಗೆ ಮಾಹಿತಿ ಇದೆ ಎಂದು ಮಾನ್ಯ ಸದಸ್ಯರಾದ ಶ್ರೀಮಾನ್ ವಸಂತ ಸಾಲಿಯಾನರವರು ತಿಳಿಸಿದ್ದಾರೆ. ಅವರಲ್ಲಿರತಕ್ಕಂತಹ ಸಂಪೂರ್ಣ ಮಾಹಿತಿಯನ್ನು ನನಗೆ ಕೊಟ್ಟರೆ ತನಿಖೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಸರ್ಕಾರದ ಅಪ್ಪಣೆ ಇಲ್ಲದೆ ಅವರು ಹೊರದೇಶಕ್ಕೆ ಹೋಗುವುದಕ್ಕೆ ಸಾಧ್ಯವಿಲ್ಲ. ಒಂದು ವೇಳೆ ಆ ರೀತಿ ಇದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ದಯಮಾಡಿ ಅವರಲ್ಲಿರುವ ಎಲ್ಲ ಮಾಹಿತಿಯನ್ನು ನನಗೆ ಒದಗಿಸಿಕೊಟ್ಟರೆ ಆದಷ್ಟು ಬೇಗ ಕ್ರಮ

ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಈ ಪರಿಸ್ಥಿತಿ ಕೇವಲ ಶಿರ್ವಾದಲ್ಲಿರುವ ಆಸ್ಪತ್ರೆಯಲ್ಲೇ ಅಲ್ಲ, ಇಡೀ ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಯವರು ನಡೆಸುತ್ತಿದ್ದಂತಹ ಆಸ್ಪತ್ರೆಗಳನ್ನು ಸರ್ಕಾರ ವಹಿಸಿಕೊಂಡ ಮೇಲೆ ಈ ರೀತಿಯ ಪರಿಸ್ಥಿತಿ ಎಲ್ಲಕಡೆ ಇದೆ. 1979 ಹಾಗೂ 1981ರಲ್ಲಿ ಸರ್ಕಾರ ಆ ರೀತಿಯ ತೀರ್ಮಾನವನ್ನು ತೆಗೆದುಕೊಂಡಿದೆ. ಅಲ್ಲಿರತಕ್ಕಂತಹ ವೈದ್ಯಾಧಿಕಾರಿಗಳು ಮತ್ತೆ ಅಲ್ಲಿರತಕ್ಕ ಇತರೇ ಸಿಬ್ಬಂದಿ ವರ್ಗ ಅವರ ಸಂಬಳ ಸಾರಿಗೆ ಇತರ ಭತ್ಯಗಳ ಬಗ್ಗೆ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಆದಕಾರಣ ಈ ರೀತಿಯ ಆಸ್ಪತ್ರೆಗಳ ಪರಿಸ್ಥಿತಿ ಸರಿಇಲ್ಲ. ಜೂನ್ ತಿಂಗಳೊಳಗೆ ಸ್ಥಳೀಯ ಸಂಸ್ಥೆಗಳು ನಡೆಸುತ್ತಿದ್ದಂತಹ ಆಸ್ಪತ್ರೆಗಳಲ್ಲಿ ಕೆಲಸಮಾಡುತ್ತಿರತಕ್ಕಂತಹ ವೈದ್ಯಾಧಿಕಾರಿಗಳು ಹಾಗೂ ಅಲ್ಲಿರತಕ್ಕಂತಹ ಸಿಬ್ಬಂದಿವರ್ಗದವರಿಗೆ ಕೊಡಬೇಕಾಗಿರುವಂತಹ ಸಂಬಳ ಸಾರಿಗೆ, ಬಡ್ತಿ, ಹಾಗೂ ನಿವೃತ್ತಿ ವೇತನದ ಬಗ್ಗೆ ಜೂನ್ 30 ರೊಳಗಾಗಿ ಕ್ರಮತೆಗೆದುಕೊಳ್ಳಬೇಕೆಂದು ಸರ್ಕಾರ ನಿರ್ಣಯ ಮಾಡಿದೆ.

ಆ ದೃಷ್ಟಿಯಿಂದ ಡಾ. ಆಚಾರ್ಯ ಅವರು ಹೇಳಿದ ಸಮಸ್ಯೆ ಪರಿಹಾರವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಶಿರ್ವಾಕ್ಕೆ ಸಂಬಂಧಪಟ್ಟ ಸಮಸ್ಯೆ ಏನಿದೆ ಅದರ ಬಗ್ಗೆ ಸದಸ್ಯರು ಸ್ಪೆಸಿಫಿಕ್ ಆಗಿ ತಿಳಿಸಿದರೆ ಕ್ರಮ ತೆಗೆದುಕೊಳ್ಳುತ್ತೇನೆ. 3-30 p.m.

8. Fire accident in Lambani Thanda, Kandakeri village, Aurad Taluk.

ಶ್ರೀ ಬಿ. ಶಿವಣ್ಣ (ದೇವದುರ್ಗ).— ಸನ್ಮಾನ್ಯ ಅಧ್ಯಕ್ಷರೆ, ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಕಂದಕೇರಿ ಗ್ರಾಮದ ಸಮೀಪದಲ್ಲಿರುವ ಲಂಬಾಣಿ ತಾಂಡಾದಲ್ಲಿ ಆಕಸ್ಮಿಕವಾಗಿ ಬೆಂಕಿ ಅನಾಹುತವಾಗಿರುವ ಬಗ್ಗೆ ಕಂದಾಯ ಮಂತ್ರಿಗಳ ಗಮನ ಸೆಳೆಯಬಯಸುತ್ತೇನೆ.

ಶ್ರೀ ವಿ. ಎಲ್. ಪಾಟೀಲ್. (ಕಂದಾಯ ಮಂತ್ರಿಗಳು).— ಮಾನ್ಯ ಅಧ್ಯಕ್ಷರೆ, ಸದರಿ ವಿಚಾರದ ಬಗ್ಗೆ ನಾನು ಈ ಹೇಳಿಕೆಯನ್ನು ಮಾಡಬಯಸುತ್ತೇನೆ:

ದಿನಾಂಕ 18ನೇ ಫೆಬ್ರವರಿ 1984ರಂದು ಮಧ್ಯಾಹ್ನ 2-30 ಗಂಟೆಗೆ, ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಕಂದಕೇರಿ ಗ್ರಾಮದ ಸಮೀಪದಲ್ಲಿರುವ ಲಂಬಾಣಿ ಮತಿರಾಮ ತಾಂಡದಲ್ಲಿ ಆಕಸ್ಮಿಕ ಬೆಂಕಿ ಅನಾಹುತ ಘಟಿಸಿತು. ಹದಿನಾಲ್ಕು ಕುಟುಂಬಗಳು ಈ ಅನಾಹುತಕ್ಕೆ ಒಳಪಟ್ಟವು. 4 ವರ್ಷದ ಒಂದು ಕೂಸು ಈ ಅನಾಹುತದಲ್ಲಿ ಮೃತಪಟ್ಟಿರುವುದು. ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ತಾತ್ಕಾಲಿಕವಾಗಿ ವಸತಿ ಸೌಕರ್ಯವನ್ನು ಒದಗಿಸಿ ನೊಂದ ಸಂತ್ರಸ್ತರಿಗೆ ತಕ್ಷಣ ಪರಿಹಾರವನ್ನು ಒದಗಿಸಲಾಗಿದ್ದು ಅಕ್ಕಿ, ಜೋಳ, ಬೇಳೆಕಾಳುಗಳು, ಎಣ್ಣೆ ಇತ್ಯಾದಿ ಆಹಾರ ಸಾಮಗ್ರಿಗಳನ್ನು ಒದಗಿಸಲಾಯಿತು. ನೊಂದ ಸಂತ್ರಸ್ತರ ಪ್ರತಿಯೊಬ್ಬರಿಗೆ ಎರಡು ಹಾಸಿಗೆ ಹೊದಿಕೆಗಳನ್ನು ಹಂಚಲಾಯಿತು. ಬೆಂಕಿ ದುರಂತದಲ್ಲಿ ಮಡಿದ ಮಗುವಿನ ತಂದೆಗೆ ರೂ. 500ಗಳನ್ನು ಮಂಜೂರುಮಾಡಲಾಗಿದೆ. ಔರಾದ್ ತಾಲ್ಲೂಕಿನ ವಿಧಾನಸಭಾ ಸದಸ್ಯರಾದ ಶ್ರೀ ಮಾಣಿಕ್‌ರಾವ್ ಪಾಟೀಲ್‌ರವರು ಒದಗಿಸಿದಂತಹ ರೂ. 1500-00ಗಳಲ್ಲಿ ಮೇಲಿನ ಪದಾರ್ಥಗಳನ್ನು ಕೊಂಡು ಒದಗಿಸಲಾಯಿತು.

ಒಟ್ಟು ಹಾನಿಯಾಗಿರುವ ನಷ್ಟದ ಅಂದಾಜು ರೂ. 46,565-00 ಇದೆ. ಎಲ್ಲ 14 ನೊಂದ ಕುಟುಂಬಗಳಿಗೆ ತಲಾ ರೂ. 800-00 ನಗದು ಪರಿಹಾರ ಮತ್ತು ರೂ. 600-00 ವಸತಿ ಸಾಮಗ್ರಿಗಳಿಗೆ ಮಂಜೂರು ಮಾಡಲಾಗಿದೆ, ಈ ರೀತಿ ಒಟ್ಟು ರೂ. 19600-00ಗಳ ಪರಿಹಾರ ಮಂಜೂರು ಮಾಡಲಾಗಿದ್ದು ಮಂಜೂರು ಮಾಡಿದ ಪರಿಹಾರದ ಮೊತ್ತವನ್ನು ಕೆಲ ಸಮಸ್ಯೆಗಳ ಕಾರಣ ತಕ್ಷಣ ನೀಡಲು ಆಗಿಲ್ಲವೆಂದು ಜಿಲ್ಲಾಧಿಕಾರಿ, ಬೀದರ್‌ರವರು ವರದಿಮಾಡಿರುತ್ತಾರೆ. ಇವುಗಳನ್ನು ನಿವಾರಿಸಿ ಆಖೈರಾಗಿ ನೊಂದ ಸಂತ್ರಸ್ತರಿಗೆ ದಿನಾಂಕ 24-3-1984ರಂದು ಜಿಲ್ಲಾಧಿಕಾರಿಗಳು ಪರಿಹಾರ ಧನವನ್ನು ಪೂರ್ತಿ ಪಾವತಿ ಮಾಡಿರುತ್ತಾರೆ. ಈ ಪ್ರಕರಣದಲ್ಲಿ ಪರಿಹಾರ ಕೊಡುವಲ್ಲಿ ಆದ ತಪ್ಪಿಸಬಹುದಾಗಿದ್ದ ವಿಳಂಬವನ್ನು ನಾನು ಗಮನಿಸಿ ಇನ್ನುಮುಂದೆ ಇಂತಹ ಪ್ರಕರಣಗಳಲ್ಲಿ ಈ ತರಹ ವಿಳಂಬವಾಗದಂತೆ ನೋಡಿಕೊಳ್ಳಲು ಸೂಕ್ತಕ್ರಮವನ್ನು ಕೈಕೊಳ್ಳುವ ಬಗ್ಗೆ ಪರಿಶೀಲಿಸುತ್ತಿದ್ದೇನೆ.

ಇಲ್ಲಿ ನೊಂದ ಸಂತ್ರಸ್ತರಿಗೆ ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಇನ್ನೂ ಹೆಚ್ಚಿನ ಪರಿಹಾರ ನೀಡುವ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಬಿ. ಶಿವಣ್ಣ.— ಅದು ಆಕಸ್ಮಿಕ ಬೆಂಕಿ ಅನಾಹುತ ಎಂದು ಮಂತ್ರಿಗಳು ಹೇಳಿದರು. ಅದು ಹೇಗೆ ಆಯಿತು ? ತಮ್ಮಲ್ಲಿ ಅದರ ಬಗ್ಗೆ ಮಾಹಿತಿ ಇದೆಯೆ ? ಅಪಘಾತಗಳು ನಾನಾ ರೀತಿಯಲ್ಲಿ ಆಗುತ್ತವೆ. ಕೆಲವರು ಮನೆಗೆ ಬೆಂಕಿ ಹಚ್ಚುತ್ತಾರೆ, ಒಬ್ಬರಿಗೊಬ್ಬರು ಜಗಳಮಾಡುತ್ತಾ ಬೆಂಕಿಹಚ್ಚುತ್ತಾರೆ, ಬೀಡಿ ಸೇದುತ್ತಾ, ಶೇದಿದ ಬೀಡಿಯ ತುಂಡನ್ನು ಆರಿಸದೆ ಎಸೆದಾಗ ಬೆಂಕಿ ಆಗುತ್ತದೆ. 18 ನೆಯ ಫೆಬ್ರವರಿಯಲ್ಲಿ ಈ ಘಟನೆ ನಡೆದಿದೆ. ಮಾರ್ಚಿ ಒಂದರವರೆಗೆ ಜಿಲ್ಲಾಧಿಕಾರಿಗಳಾಗಲೀ, ಸ್ಥಳೀಯ ಅಧಿಕಾರಿಗಳಾಗಲೀ ಇದರ ಬಗ್ಗೆ ಕ್ರಮತೆಗೆದುಕೊಂಡಿಲ್ಲ. ನಾವು ಹೇಗೆ ಪ್ರಶ್ನೆ ಕೇಳಿದ್ದೆವೋ ಅದೇ ಪ್ರಕಾರ ಉತ್ತರ ಇದೆ. ತಾವು ಅಸೆಂಬ್ಲಿಯಲ್ಲಿ ಉತ್ತರಕೊಡುವಾಗ ಯಾವರೀತಿ ಬೆಂಕಿ ಅಪಘಾತವಾಯಿತು,